ತನ್ನತ್ತ ಸೆಳೆಯುತ್ತಿರುವ ದೇಶಗಳಲ್ಲಿ ಐರ್ಲೆಂಡ್ ಮುಂಚೂಣಿಯಲ್ಲಿದೆ. ಇಲ್ಲಿ ಓದುವ ಮತ್ತು ಇತರೆ ಖರ್ಚುಗಳು, ಅಮೆರಿಕ, ಕೆನಡಾಗಳಿಗಿಂತ ಕಡಿಮೆ ಇರುವುದು ಮತ್ತು ಸ್ಥಳೀಯ ಭಾಷೆ ಕಲಿಯುವ ಅವಶ್ಯಕತೆ ಇಲ್ಲದಿರುವುದು ಕಾರಣವಿರಬಹುದು.

ನಾವು ರಿಪಬ್ಲಿಕ್ ಆಫ್ ಐರ್ಲೆಂಡ್ ರಾಜಧಾನಿ ಡಬ್ಲಿನ್‌ಗೆ ಹೊರಟಿದ್ದೆವು. ಬೆಂಗಳೂರಿನಿಂದ ಡಬ್ಲಿನ್‌ಗೆ ನೇರ ವಿಮಾನ ಸಂಪರ್ಕ ಇಲ್ಲ. ಅಬುಧಾಬಿ ಅಥವಾ ದುಬೈ ಮೂಲಕ ಸುಮಾರು 14 ಗಂಟೆಗಳ ಪ್ರಯಾಣ ಮಾಡಬೇಕು.

'ಡಬ್ಲಿನ್' ಸ್ವಚ್ಛ, ಸುಂದರ ನಗರ. ಈ ನಗರದ ಸುತ್ತಮುತ್ತಲಿನ ಅನೇಕ ಪ್ರೇಕ್ಷಣೀಯ ಸ್ಥಳಗಳು ನೋಟದಲ್ಲಿ, ಜೊತೆಗೆ ಇತಿಹಾಸದಲ್ಲಿಯೂ ಒಂದಕ್ಕಿಂತ ಒಂದು ಆಕರ್ಷಕ. ಒಂದೊಂದಾಗಿ ಅವುಗಳ ಬಗ್ಗೆ ತಿಳಿಯುತ್ತಾ ಸಾಗೋಣ...

## ಭಾರತೀಯ ಶಿಲ್ಪಕಲೆಯ ಉದ್ಯಾನ

ಡಬ್ಲಿನ್‌ನಿಂದ 28 ಕಿ.ಮೀ. ದೂರದಲ್ಲಿ, 22 ಎಕರೆ ವಿಶಾಲ ಪ್ರದೇಶದಲ್ಲಿ ವಿಕ್ಟರ್ ಲಾಂಗ್‌ಹೆಲ್ಡ್ ಎಂಬ ಸ್ಥಳೀಯ ನಿವಾಸಿ, ತನ್ನ ಖಾಸಗಿ ಪ್ರದೇಶದಲ್ಲಿ ನಿರ್ಮಿಸಿರುವ ಈ ಪಾರ್ಕ್‌ನಲ್ಲಿ 14 ಬೃಹತ್ ಗಾತ್ರದ ಕಪ್ಪು ಬೆಣಚುಕಲ್ಲಿನ ಶಿಲ್ಪಕಲಾಕೃತಿಗಳಿವೆ. 1989ರಲ್ಲಿ ಆತ ಭಾರತಕ್ಕೆ ಬಂದಿದ್ದಾಗ, ಇಲ್ಲಿನ ಕಲಾಕೃತಿಗಳನ್ನು ಕಂಡು ವಿಸ್ಮಯಗೊಂಡು ತನ್ನ ಜಾಗದಲ್ಲೂ ಇಂತಹ ಬೃಹತ್ ಆಕೃತಿಗಳನ್ನು ನಿರ್ಮಿಸಬೇಕೆಂದು ನಿರ್ಧರಿಸಿ ಈ ಸಾಹಸಕ್ಕೆ ಕೈ ಹಾಕಿದ. ತಮಿಳುನಾಡಿನ ಮಹಾಬಲಿಪುರಂನಲ್ಲಿ ಕೆತ್ತನೆ ಕೆಲಸಗಳನ್ನು ಮಾಡಿಸಿ, ಹಡಗಿನ ಮೂಲಕ ಡಬ್ಲಿನ್‌ಗೆ ತರಿಸಿ ಅಲ್ಲಿ ಪಾರ್ಕ್ ನಿರ್ಮಿಸಲು ಸುಮಾರು 20 ವರ್ಷಗಳೇ ಬೇಕಾಯಿತು.

ಕಲ್ಲುಗಳ ಆಯ್ಕೆಯಿಂದ ಹಿಡಿದು ಕೆತ್ತನೆ ಕಾರ್ಯದ ವಿವಿಧ ಹಂತಗಳು, ಸಮುದ್ರದ ಮೂಲಕ ಸಾಗಿಸುವ ದೃಶ್ಯಗಳು, ಇದರ ಛಾಯಾಚಿತ್ರಗಳನ್ನು, ಪಾರ್ಕ್ ಪ್ರವೇಶದ್ವಾರದ ಬಳಿ ಸಣ್ಣ ಕೊಠಡಿಯಲ್ಲಿ ಇಡಲಾಗಿದೆ. ಒಟ್ಟು 14 ವಿಗ್ರಹಗಳಲ್ಲಿ ಎಂಟು ವಿಗ್ರಹಗಳು ಗಣಪತಿಯ ವಿವಿಧ ಭಂಗಿಗಳಲ್ಲಿದ್ದು, ಮುದ ನೀಡುತ್ತವೆ. ಶಿವ ಹಾಗೂ ನಾಗರಾಜನ ವಿಗ್ರಹಗಳು ಮನೋಹರ. ಡಬ್ಲಿನ್‌ಗೆ ಭೇಟಿ ಕೊಟ್ಟಾಗ ಈ ಪಾರ್ಕ್ ನೋಡಿದರೆ, ಭಾರತೀಯ ಶಿಲ್ಪಕಲಾಕೃತಿ ಬಗ್ಗೆ ಹೆಮ್ಮೆ ಮೂಡುತ್ತದೆ.

## ಮನೋಹರ ಕ್ಲಿಫ್ಸ್ ಆಫ್ ಮೊಹರ್

ಐರ್ಲೆಂಡ್‌ನ ಪ್ರಮುಖ ಆಕರ್ಷಣೆಗಳಲ್ಲಿ ಇದೂ ಒಂದು. ಡಬ್ಲಿನ್‌ನಿಂದ ರೈಲಿನಲ್ಲಿ ಗಾಲ್ವಾಯ್‌ಗೆ 200 ಕಿ.ಮೀ.ಗಳನ್ನು ಸುಮಾರು 2 ಗಂಟೆ ಪಯಣ ಮಾಡಿ, ಅಲ್ಲಿಂದ ರಸ್ತೆ ಮೂಲಕ 47 ಕಿ.ಮೀ. ಸಾಗಿ ಈ ಜಾಗ ತಲುಪಬೇಕು. ಬೃಹದಾಕಾರದ ಈ ಬಂಡೆಗಳು 700 ಅಡಿ ಎತ್ತರವಿದ್ದು, ಅಟ್ಲಾಂಟಿಕ್ ಸಮುದ್ರ ದಡದಲ್ಲಿವೆ. ದೂಲಿನ್ ಫೆರ್ರಿ ಮತ್ತು ಕ್ಲಿಫ್ಸ್ ಆಫ್ ಮೊಹರ್ ಎಂಬ ಕಂಪನಿಗಳು ಇಲ್ಲಿ ಕ್ರೂಸ್ ವ್ಯವಸ್ಥೆ ನಡೆಸುತ್ತಿದ್ದು, ದೋಣಿ ಮೂಲಕ ಸಾಗಿ ಈ ಬೃಹತ್ ಬಂಡೆಗಳನ್ನು ತೋರುತ್ತಾರೆ.



ರೋಮಾಂಚನಕಾರಿ ಅನುಭವ ದಕ್ಕಿಸಿಕೊಡುವ ಆವೊಂಡೇಲ್

ರಿಪಬ್ಲಿಕ್ ಆಫ್ ಐರ್ಲೆಂಡ್‌ನ ಪಶ್ಚಿಮ ಘಟ್ಟದಲ್ಲಿ, ಕಂಟ್ರೀ ಕ್ಲೇಯರ್ ಎಂಬಲ್ಲಿಂದ ಈ ಮನೋಹರ ಪ್ರಕೃತಿ ಸೌಂದರ್ಯ ನೋಡಲು ಎರಡು ಕಣ್ಣುಗಳು ಸಾಲದೆನಿಸಿದವು. ಈ ಪ್ರದೇಶ ಅತ್ಯಂತ ಭಯಾನಕವಾಗಿರುವುದೂ ಹೌದು. 1993ರಿಂದೀಚೆಗೆ, ಅಂದರೆ 30 ವರ್ಷಗಳಲ್ಲಿ ಅಂದಾಜು 66 ಪ್ರವಾಸಿಗರು ಚಾರಣದಲ್ಲಿ ತಮ್ಮ ಜೀವ ಕಳೆದುಕೊಂಡಿದ್ದಾರೆ. ಇಲ್ಲಿನ ಸೂರ್ಯಾಸ್ತ ರಮಣೀಯ, ಆದರೆ ಹವಾಮಾನ ಅನುಕೂಲವಾಗಿರಬೇಕಷ್ಟೆ.

ಪಫಿನ್ಸ್ (**Puffins**) ಎಂಬ ಸುಂದರ ಪಕ್ಷಿಗಳು ಇಲ್ಲಿ ಸಂತಾನೋತ್ಪತ್ತಿಗೆ ವಲಸೆ ಬರುತ್ತವೆ. ಇವುಗಳ ರೆಕ್ಕೆಗಳು ಚಿಕ್ಕದಾಗಿದ್ದು, ಒಂದು ನಿಮಿಷಕ್ಕೆ 400ಕ್ಕೂ ಹೆಚ್ಚು ಬಾರಿ ಬಡಿಯುತ್ತಾ, ಒಂದು ಗಂಟೆಗೆ 88–90 ಕಿ.ಮೀ.ವರೆಗೂ ಹಾರುತ್ತವೆ. ಅತ್ಯಂತ ಪ್ರತಿಕೂಲ ಹವಾಮಾನವಿರುವ ಈ ಜಾಗದಲ್ಲಿ ಅದರ ಮೊಟ್ಟೆಗಳಿಗೆ ಹಾನಿಯಾಗದಿರುವುದು ಪ್ರಕೃತಿಯ ವಿಸ್ಮಯವೇ ಸರಿ.

## ರೋಚಕ ಅನುಭವದ ಆವೊಂಡೇಲ್

ಐರ್ಲೆಂಡ್‌ನ ಪೂರ್ವಕ್ಕೆ, ರಾಥ್‌ಡ್ರಮ್‌ನಿಂದ 1.5 ಕಿ.ಮೀ. ದೂರದಲ್ಲಿ, 500 ಎಕರೆ ಪ್ರದೇಶ ಆವೊಂಡೇಲ್ ಪಾರ್ಕ್ ಆಗಿದೆ. ಐರ್ಲೆಂಡ್‌ನ ಅತಿ ಎತ್ತರದ, ಸಂಪೂರ್ಣ ಮರದಲ್ಲೇ ಮಾಡಿರುವ ಆಕೃತಿ ಎಂದು ಹೆಸರುವಾಸಿಯಾಗಿರುವ 38 ಅಡಿ ಎತ್ತರವಿರುವ ಈ ಪಾರ್ಕ್ ತುತ್ತ ತುದಿಯಿಂದ 360 ಡಿಗ್ರಿ ವೀಕ್ಷಣೆ ಮಾಡಬಹುದು. ಮಾರ್ಗಮಧ್ಯ ಕೆಲವು ಅಡಚಣೆಗಳನ್ನು ಉದ್ದೇಶಪೂರ್ವಕವಾಗಿ ಹಾಕಲಾಗಿದೆ. ಇವನ್ನು ದಾಟುವ ಅನುಭವ ಎಂಥವರಿಗೂ ರೋಮಾಂಚಕ. ಇಳಿಯುವಾಗ ನಡೆದೇ ಬರಬಹುದು ಇಲ್ಲವೇ ಆಕೃತಿಗೆ ಹೊಂದಿಕೊಂಡ ಟ್ಯೂಬ್‌ನಲ್ಲಿ ಜಾರಿ ಬರಬಹುದು.

## ಪಾನಪ್ರಿಯರ ಸ್ವರ್ಗ 'ಟೆಂಪಲ್ ಬಾರ್'

ಪಾನಪ್ರಿಯರಿಗೆ ಐರ್ಲೆಂಡ್ ಸ್ವರ್ಗ. 1840ರಲ್ಲಿ ಇದು ಸ್ಥಾಪಿತವಾಗಿದ್ದು, ಸರ್ ವಿಲಿಯಂ ಟೆಂಪಲ್ ಅಲ್ಲಿ ವಾಸವಿದ್ದುದರಿಂದ, ಇಡೀ ಪ್ರದೇಶಕ್ಕೆ 'ಟೆಂಪಲ್ ಬಾರ್' ಎಂಬ ಹೆಸರಿಡಲಾಗಿದೆ.

ಸರ್ ವಿಲಿಯಂ ಟೆಂಪಲ್ (1555–1627) ಜ್ಞಾನಿಯಾಗಿದ್ದರೂ, ಭ್ರಷ್ಟಾಚಾರದಿಂದ ನೀಚ ರಾಜಕಾರಣಿಯಾಗಿ ಪ್ರಸಿದ್ಧಿ ಪಡೆದವ. ಟ್ರಿನಿಟಿ ಕಾಲೇಜ್, ಲಂಡನ್‌ನ ಮುಖ್ಯಸ್ಥನಾಗಿದ್ದ ಈತ ತನ್ನ ಸ್ನೇಹಿತರೊಂದಿಗೆ ಅಲ್ಲಿಯ ರಾಣಿಯನ್ನೇ ಪದಚ್ಯುತಿಗೊಳಿಸಲು ಹುನ್ನಾರ ಮಾಡಿದ್ದ. ಅದೃಷ್ಟವಶಾತ್ ಈತನನ್ನು ಗಲ್ಲಿಗೇರಿಸದೆ ಜುಲ್ಮಾನೆ ಹಾಕಿ ಗಡಿಪಾರು ಮಾಡಿದರು. ಅಲ್ಲಿಂದ 1617ರಲ್ಲಿ ನೇರವಾಗಿ ತಾನು ಮುಂಚೆ ಇದ್ದ ಐರ್ಲೆಂಡ್‌ಗೆ ವಾಪಸ್ಸು ಬಂದು, ಐಷಾರಾಮಿ ಜೀವನ ನಡೆಸಿ 1627ರಲ್ಲಿ ತೀರಿಕೊಂಡನು. ಈ ಜಾಗಕ್ಕೆ ಈತನ ಹೆಸರೇ ಸೇರಿಹೋಗಿದೆ. ಪಾನಮತ್ತರಾಗಿರುವ ಜನರಿಂದ, ಕಿವಿಗಡಚಿಕ್ಕುವ ಸಂಗೀತದಿಂದ ಇಡೀ ಪ್ರದೇಶ ತುಂಬಿರುತ್ತದೆ.

## ವಿಶ್ವ ಪ್ರಸಿದ್ಧ 'ಗಿನ್ನಿಸ್ ಬಾರ್'

ಆರ್ಥರ್ ಗಿನ್ನಿಸ್ 1759ರಲ್ಲಿ ಸ್ಥಾಪಿಸಿದ ಗಿನ್ನಿಸ್ ಬ್ರೆವೆರಿ, ಡಬ್ಲಿನ್ ಜನಪ್ರಿಯತೆಯಲ್ಲಿ ಪಾಲು ಪಡೆದುಕೊಂಡಿದೆ. ಇದು ವಿಶ್ವದ ಪ್ರಸಿದ್ಧ ಬಿಯರ್ ತಯಾರಿಸುವ ಘಟಕ. **'Guinness is Good'** ಎಂಬ ಶೀರ್ಷಿಕೆಯಡಿ ಪ್ರಪಂಚದಾದ್ಯಂತ ಇದರ ಬೇಡಿಕೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಕಳೆದ ವರ್ಷಗಳಲ್ಲಿ ಸುಮಾರು 8500 ಲಕ್ಷ ಲೀಟರ್‌ಗಳಷ್ಟು ಬಿಯರ್ ತಯಾರಿಸಿ ದಾಖಲೆ ನಿರ್ಮಿಸಿದೆ. ಗ್ಲಾಸ್ ಪೂರ ತುಂಬಿರುವ ಬೀರ್‌ನ ನೊರೆಯ ಮೇಲೆ ಛಾಯಾಚಿತ್ರ ಹಾಕಿಕೊಡುವ ವಿಶಿಷ್ಟ ರೂಢಿಯೂ ಇಲ್ಲಿದೆ.

ಐರ್ಲೆಂಡ್‌ನಲ್ಲಿ ಮೋಜು ಮಾತ್ರವಲ್ಲ, ಧಾರ್ಮಿಕತೆಯೂ ಮಿಳಿತಗೊಂಡಿರುವುದನ್ನು ಇಲ್ಲಿನ ಗುರುದ್ವಾರ, ದೇವಾಲಯಗಳಲ್ಲಿ ಪ್ರತಿದಿನ ನಡೆಯುವ ಲಂಗರ್ ತೋರುತ್ತದೆ. ಇತ್ತೀಚೆಗೆ, ಅಂದರೆ ಮೇ 2023ರಲ್ಲಿ, ಹಿಂದೂ ದೇವಾಲಯ ಪ್ರಾರಂಭವಾಗಿದೆ. ಇಲ್ಲಿಗೆ ಭೇಟಿ ನೀಡುವ ಭಾರತೀಯರು ಹೆಚ್ಚಾದಂತೆಲ್ಲ ಹೋಟೆಲ್‌ಗಳ ಸಂಖ್ಯೆ ಕೂಡ ಹೆಚ್ಚಿವೆ.

ನಿತ್ಯಹರಿದ್ವರ್ಣದ ಪರಿಸರ, ಬೃಹದಾಕಾರದ ಪಾರ್ಕ್‌ಗಳು, ಅಚ್ಚುಕಟ್ಟಾದ ವ್ಯವಸ್ಥೆ, ಸ್ವಚ್ಛ ಹಾಗೂ ಅಗಲ ರಸ್ತೆಗಳು, ಶಿಸ್ತುಬದ್ಧ ವಾಹನ ಸಂಚಾರ, ಇವೆಲ್ಲವುಗಳಿಂದ ಐರ್ಲೆಂಡ್ ದೇಶವನ್ನು ಮತ್ತೆ ಮತ್ತೆ ನೋಡಬೇಕೆನಿಸುವುದರಲ್ಲಿ ಯಾವುದೇ ಅತಿಶಯೋಕ್ತಿಯಿಲ್ಲ.

ಪ್ರತಿಕ್ರಿಯಿಸಿ: **feedback@sudha.co.in**